ಅವರಿಬ್ಬರೂ 'ಶ್ರೀನಿವಾಸಾಯ ಮಂಗಳಂ' ಎಂದು ಹೇಳಿಕೊಂಡು ಮನೆಗೆ ಹೋಗುತ್ತಿದ್ದರು. ಆಗ ಪ್ಯಾಕ್ ಬಂದು ಭಿಕ್ಷುಕರನ್ನು ಕರೆದುಕೊಂಡು ಹೋಗುವಂತೆ ಆ ಹುಡುಗರನ್ನು ಕರೆದುಕೊಂಡು ಹೋಯಿತು. ಈ ರೀತಿಯಾಗಿ ಮಕ್ಕಳು ಮನೆಗೆ ಬಾರದೆ ತಂದೆ ತಾಯಿಗಳಿಗೆ ಯೋಚನೆಯಾಯಿತು, ಮಕ್ಕಳೂ ಹೋದರು, ಪಾತ್ರೆಯೂ ಸಹ ಹೋಯಿತು. ಕಡೆಗೆ ಅವರು ವಾಪಸುಬಂದರು. ಹೀಗೆ ನಮ್ಮ ದೇಶದಲ್ಲಿ ಸನ್ಯಾಸಿಗಳು, ಬೈರಾಗಿಗಳು, ಮತ ಸಂಪ್ರದಾಯ ಉಳ್ಳವರು ಆಗಾಗ್ಗೆ ಭಿಕ್ಷಾವೃತ್ತಿಯನ್ನು ನಡೆಸುತ್ತಾರೆ. ಇದನ್ನು ಕಾನೂನು ಮಾಡಿ ತಪ್ಪಿಸುವುದಕ್ಕಾಗುವುದಿಲ್ಲ. ಅದರಲ್ಲೂ ಹಿಂದೂ ಮತ್ತು ಮುಸ್ಲಿಂ ಸಮಾಜದಲ್ಲಿ ಇದು ಜಾಸ್ತಿ. ಮಹಮದೀಯರಲ್ಲಿ ಭಿಕ್ಷುಕರಿಗೆ ಸಹಾಯ ಮಾಡುವುದು, ಧರ್ಮ ಮಾಡುವುದು ಕಡ್ಡಾಯವಾಗಿದೆ. ಆದ್ದರಿಂದ ನಮ್ಮ ದೇಶದಲ್ಲಿ ಬೆಂಗಳೂರಿನಲ್ಲಿ ಮಾಡಿರುವ ರೀತಿಯಲ್ಲಿ ಒಂದು ಭಿಕ್ಷುಕರ ಆಲಯವನ್ನು ತೆರೆದು ಭಿಕ್ಷಾವೃತ್ತಿಯನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆ, ಈ ರೀತಿ ಭಿಕ್ಷುಕರ ಆಲಯಗಳನ್ನು ನಡೆಸದೆ ಅನಾಥಾಶ್ರಮಗಳು, ಅಬಲಾಶ್ರಮಗಳು ಇಂಥವುಗಳೇನಿವೆಯೋ ಅವುಗಳಿಗೆ ಗ್ರಾಂಟು ಕೊಟ್ಟು ವಿವೇಚನೆಯಿಂದ ಈ ವೃತ್ತಿಗೆ ತಡೆ ಮಾಡಬೇಕು. ಸರ್ಕಾರದಿಂದ ನಿರರ್ಥಕವಾಗಿ ಹಣ ಖರ್ಚುಮಾಡಿ ಸಮಾಜದಲ್ಲಿರುವ ಲೋಪದೋಷಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲದಂಥ ಈಗ ಮಾಡಿರುವ ವಿಪರ್ಯಾಸು ಸರಿಯಲ್ಲ. ಇದನ್ನು ಬದಲಾಯಿಸಬೇಕು.

ಇನ್ನೊಂದು ವಿಷಯವೇನೆಂದರೆ, ನಮ್ಮ ದೇಶದಲ್ಲಿ ಬಡತನ ಬಹಳವಾಗಿದೆ. ಅದನ್ನು ಹೋಗಲಾಡಿಸುವುದಕ್ಕೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದಕ್ಕೆ ಸರಿಯಾದ ವಿಪರ್ಯಾಸು ಮಾಡಿದರೆ ಬಹಳಮಟ್ಟಿಗೆ ಭಿಕ್ಷಾವೃತ್ತಿ ತಪ್ಪುತ್ತದೆ. ಈಗ ಸೋಷಿಯಲಿಸ್ಟಿಕ್ ಪ್ಯಾಟ್ರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆ ಸೊಸೈಟಿ ಸ್ಥಾಪನೆಯಾದಾಗ ಅದರಲ್ಲಿ ಭಿಕ್ಷಾವೃತ್ತಿಗೆ ಯಾವ ಸ್ಥಾನವಿದೆಯೆಂದು ಯೋಚನೆ ಮಾಡಬಹುದು. ಈಗ ಸೋಷಿಯಲಿಸ್ಟಿಕ್ ಪ್ಯಾಟ್ರ್ನ್ ಆಫ್ ಸೊಸೈಟಿ ಬರುವುದಕ್ಕೆ ಬಹಳ ಕಾಲವಿದೆ. ಅದು ಬರುವುದಕ್ಕೆ ಮುಂಚೆ ಭಿಕ್ಷಾವೃತ್ತಿ ತಡೆಯಬೇಕಾದರೆ ಹೆಚ್ಚು ಪರಿಣಾಮಕಾರಿಯಾದ ಕಾರ್ಯವನ್ನು ಸಾರ್ವಜನಿಕರ ಸಹಕಾರ ಪಡೆದು ಮಾಡಬೇಕಾಗುತ್ತದೆ ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

Resignation of a Member.

Mr. SPEAKER.—Before the House adjourns for lunch, I want to make an announcement—an unpleasent announcement no doubt.

As required under rule 177, the Chair desires to announce that Sri Gangappa, a member representing Bellary, has resigned his seat in the Assembly.

Now the House will rise for lunch and meet again at 3-30 P.M.

The House adjourned at Three of the Clock and re-assembled after Lunch at Thirty-six Minutes past Three of the Clock.

[MR. DEPUTY SPEAKER in the Chair]

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ನಮ್ಮ ಮೈಸೂರು ಸರ್ಕಾರದ ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯ ವಿಚಾರವಾಗಿ ಒಂದೆರಡು ಅಂಶಗಳನ್ನು ಈಗ ಈ ಮಾನ್ಯಸಭೆಯ ಗಮನಕ್ಕೆ ತರಬೇಕೆಂದು ಬಯಸಿದ್ದೇನೆ. ಈ ದಿವಸ ಮೈಸೂರು ದೇಶದಲ್ಲಿರತಕ್ಕಂಥ ನಮ್ಮ ನಾನಾ ಇಲಾಖೆಗಳಿಗೆ ಬೇಕಾಗತಕ್ಕ ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗಿದ್ದರೆ ಆ ಸಾಮಾನುಗಳ ಬಗ್ಗೆ ಟೆಂಡರುಗಳನ್ನು ಕರೆದು ಆ ಸಾಮಾನುಗಳನ್ನು ಯಾವ ಕಂಪೆನಿಯವರು ಇಲ್ಲವೇ ಯಾವ ಫರ್ಮ್‌ಗಳವರು ಇತರ ಉದ್ಯಮಗಳವರ ಬೆಲೆಗಿಂತ ಕಡಮೆ ದರದಲ್ಲಿ ಒದಗಿಸುತ್ತಾರೋ ಅಂಥವರಿಂದ ಕೊಂಡುಕೊಳ್ಳಬೇಕೆಂದು ಒಂದು ವಿಧಾಯಕ ಮಾಡಿದ್ದಾರೆ. ಆದರೆ ಈ ದಿವಸ ಕೆಲವು ಇಲಾಖೆಗಳು ತಮಗೆ ಬೇಕಾಗುವಂಥ ಸಾಮಾನುಗಳನ್ನು ಕೊಂಡುಕೊಳ್ಳುವಾಗ ಈ ರೀತಿ ಯಾವ ಟೆಂಡರುಗಳನ್ನೂ S.P.C. ಮೂಲಕ ಕರೆಯದೆ ಹಾಗೆ ಆ ಇಲಾಖೆಯರೇ ನೇರವಾಗಿ ಟೆಂಡರ್ ಕರೆದು ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಈ ಸಾಮಾನುಗಳನ್ನು ಇಲಾಖೆಯವರೇ ನೇರವಾಗಿ ಕೊಳ್ಳದೆ ಅವುಗಳನ್ನು ವಿಧಾಯಕವಾಗಿರತಕ್ಕ ರೀತಿಯಲ್ಲಿ S.P.C. ಮೂಲಕ ಟೆಂಡರ್ ಕರೆದು ಕೊಂಡುಕೊಂಡರೆ ಇಲಾಖೆಯವರು ಕರೆಯತಕ್ಕ ಟೆಂಡರ್ ಬೆಲೆಗಿಂತಲೂ S.P.C. ಟೆಂಡರಿನ ಬೆಲೆಗಳು ಜಾಸ್ತಿ ಇರುತ್ತವೆ. ಉದಾಹರಣೆಗೆ ಹೇಳುವುದಾದರೆ ಒಂದಾವರ್ತಿ ಎಲೆಕ್ಟ್ರಿಕಲ್ ಇಲಾಖೆಗೆ ಕೆಲವು ಕಂಬಗಳು ಬೇಕಾಗಿತ್ತು. ಆಗ ಈ ಇಲಾಖೆಯವರೇ ನೇರವಾಗಿ ಟೆಂಡರುಗಳನ್ನು ಕರೆದರು. ಆಗ 25 ರೂಪಾಯಿಗಳಿಗೆ ಒಂದು ಕಂಬವನ್ನು ನರಬರಾಯಿ ಮಾಡುತ್ತೇವೆಂದು ಟೆಂಡರುಗಳು ಬಂದವು. ಅದೇ ಕಂಬಗಳ ಬಗ್ಗೆ ಮತ್ತೊಂದು ಕಡೆಯಲ್ಲಿ ಈ S.P.C. ಮೂಲಕವೂ ಟೆಂಡರುಗಳನ್ನು ಕರೆಯಲಾಗಿತ್ತು. ಆದರೆ ಇಲಾಖೆಯವರು ಕರೆದಿದ್ದ ಟೆಂಡರುಗಳ ಪ್ರಕಾರ 25 ರೂಪಾಯಿಗಳಿಗೇ ದೊರೆಯುತ್ತಿದ್ದಂಥ ಕಂಬಗಳನ್ನು S.P.C. ಟೆಂಡರುಗಳ ಪ್ರಕಾರ 28 ರೂಪಾಯಿಗಳಿಗೊಂದು ಕಂಬದಂತೆ ಕೊಳ್ಳಬೇಕಾಯಿತು. ಹೀಗೆ S.P.C. ಟೆಂಡರ್ ಪ್ರಕಾರ ಒಂದೊಂದು ಕಂಬಕ್ಕೂ ಮೂರು ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾಗಿ ಬಂತು. ಈ ವಿಧಾನದಲ್ಲಿ ಕಾಲಹರಣೆಯೂ ಆಗಿ ಒಂದು ತಿಂಗಳಿನೊಳಗೆ ಆಗತಕ್ಕಂಥ ಕೆಲಸಕ್ಕೆ ಒಂದು ವರ್ಷ ಹಿಡಿಯಿತು. ಹೀಗೆ ಕಾಲಮಿಾರಿ ಹೋದದ್ದರಿಂದ ಆ ಹಣವೂ ವ್ಯಾಪ್ತಾಗಿ ಹೋಯಿತು. ಕೊನೆಗೆ ಆ ಕೆಲ